
## ತಾಯಿಯಿಂದ ಸಂನ್ಯಾಸಕ್ಕೆ ಸಮ್ಮತಿ

ಒಂದು ದಿನ ಶಂಕರರು ಪೂರ್ಣಾನದಿಯಲ್ಲಿ ಸ್ನಾನ ಮಾಡುತ್ತಿದ್ದಾರೆ. ತಾಯಿಯೂ ಅಲ್ಲಿಯೇ ಇದ್ದಾರೆ. ಇದ್ದಕ್ಕಿದ್ದಂತೆ ಮೊಸಳೆಯೊಂದು ಅವರ ಕಾಲನ್ನು ಹಿಡಿದು ನೀರಿನೊಳಗೆ ಎಳೆಯತೊಡಗಿತು. ಆಗ ಶಂಕರರು ತಾಯಿಯನ್ನು ಕುರಿತು, "ಅಮ್ಮಾ, ನನ್ನ ಆಯಸ್ಸು ಮುಗಿಯಿತು. ಈ ಮೊಸಳೆ ನನ್ನನ್ನು ಒಳಕ್ಕೆ ಎಳೆಯುತ್ತಿದೆ. ಈಗ ಸಂನ್ಯಾಸ ತೆಗೆದುಕೊಳ್ಳಲು ನೀನು ನನಗೆ ಅಪ್ಪಣೆ ಕೊಟ್ಟರೆ, ಅದು ನನಗೆ ಹೊಸ ಜನ್ಮ ಬಂದಹಾಗೆ ಆಗುತ್ತದೆ. ನಾನು ಬದುಕುತ್ತೇನೆ. ಇಲ್ಲದಿದ್ದರೆ ಸಾಯುತ್ತೇನೆ. ಬೇಗ ನನಗೆ ಅಪ್ಪಣೆ ಕೊಡು" ಎಂದರು. ಮಗನ ಅವಸ್ಥೆಯನ್ನು ಕಂಡು ದಿಙ್ಮೂಢಳಾಗಿದ್ದ ಆರ್ಯಾಂಬೆಗೆ ಏನೂ ಮಾಡಲು ತೋಚಲಿಲ್ಲ. ಸದ್ಯ ಮಗ ಬದುಕಿ ಉಳಿದರೆ ಸಾಕು ಎಂದು ಆಕೆ, "ಮಗು, ಈಶ್ವರನ ಇಚ್ಛೆ ಇದ್ದಂತಾಗಲಿ, ನೀನು ಸಂನ್ಯಾಸಿಯಾಗು" ಎಂದು ಅಪ್ಪಣೆ ಕೊಟ್ಟುಬಿಟ್ಟಳು. ಮೊಸಳೆಯು ಶಂಕರರನ್ನು ಬಿಟ್ಟು ಹೊರಟುಹೋಯಿತು. ಮೊಸಳೆಯ ಬಾಯಿಯಿಂದಷ್ಟೇ ಅಲ್ಲ, ಸಂಸಾರದ ಕುತ್ತಿನಿಂದಲೂ ಶಂಕರರು ಹೀಗೆ ಪಾರಾದರು.



ಈಗ ಶಂಕರರು ಮನೆ ಬಿಟ್ಟು ಹೊರಡಲು ತಾಯಿಯ ಅಪ್ಪಣೆಯನ್ನು ಬೇಡಿದರು. ತಾಯಿಗೆ ಇದ್ದ ಆಸರೆ ಈ ಮಗನೊಬ್ಬನೇ. ದುಃಖವಾದರೂ ಆಕೆ ಕನಸಿನಲ್ಲಿ ಬಂದಿದ್ದ ಈಶ್ವರನ ವಚನವನ್ನು ಜ್ಞಾಪಿಸಿಕೊಂಡಳು. ಶಂಕರ ಕೇವಲ ತನ್ನ ಮಗನಷ್ಟೇ ಅಲ್ಲ, ಅವನು ಭಗವಂತನ ಮತ್ತು ಲೋಕದ ಸೇವೆಗಾಗಿಯೇ ಹುಟ್ಟಿದವನು ಎಂದು ಮನಗಂಡಳು. "ಕೀರ್ತಿಶಾಲಿಯಾಗು" ಎಂದು ಹರಸಿ ಶಂಕರರಿಗೆ ಹೊರಡಲು ಅಪ್ಪಣೆಯನ್ನು ಕೊಟ್ಟಳು. ಆದರೂ ಹೆತ್ತಕರುಳು ತಡೆಯಲಿಲ್ಲ. "ಶಂಕರ, ನಾನು ಸಾಯುವುದಕ್ಕೆ ಮುಂಚೆ ಒಮ್ಮೆಯಾದರೂ ನಿನ್ನನ್ನು ಮತ್ತೆ ನೋಡುತ್ತೇನೆಯೇ?" ಎಂದು ಕೇಳಿದಳು. ಆಗ ಶಂಕರರು ತಾಯಿಗೆ ವಚನವಿತ್ತರು. "ಅಮ್ಮ, ನಿನ್ನ ಅವಸಾನಕಾಲದಲ್ಲಿ ನನ್ನನ್ನು ಸ್ಮರಿಸಿಕೊ, ನಾನು ಎಲ್ಲಿದ್ದರೂ ನಿನ್ನೆಡೆಗೆ ಬರುತ್ತೇನೆ. ನಿನ್ನ ಅಂತ್ಯಕಾಲದ ಸೇವಾಭಾಗ್ಯ ನನಗೆ ಸಿಕ್ಕಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ" ಎಂದು ಹೇಳಿದರು. ತಾಯಿ ತನ್ನ ಮನಸ್ಸನ್ನು ದೇವರೆಡೆಗೆ ತಿರುಗಿಸಲಿ ಎಂದು ಯೋಚಿಸಿ, ಶಂಕರರು ಮನೆಯಲ್ಲಿ ಶ್ರೀಕೃಷ್ಣನ ವಿಗ್ರಹವನ್ನು ಸ್ಥಾಪಿಸಿದರು. ತಮ್ಮ ತಾಯಿಯ ಯೋಗಕ್ಷೇಮವನ್ನು ನೋಡಿಕೊಳ್ಳುವಂತೆ ನೆರೆಹೊರೆಯವರಿಗೆ ವಿನಂತಿಸಿ ಮನೆ, ಊರು ಬಿಟ್ಟು ಹೊರಟೇಬಿಟ್ಟರು.

## ಗುರುವಿನ ಸನ್ನಿಧಿ

ಮನೆ ಬಿಟ್ಟು ಬಂದ ಶಂಕರರು ಗುರುವಿನ ಅನ್ವೇಷಣೆಯಲ್ಲಿ ತೊಡಗಿದರು. ನರ್ಮದಾ ನದಿಯ ತೀರವನ್ನು ಸೇರಿದರು. ಅಲ್ಲಿ ಮಹಾಯೋಗಿಗಳಾದ ಗೋವಿಂದ ಭಗವತ್ಪಾದರನ್ನು ಕಂಡರು. ಸಮಾಧಿಸ್ಥಿತಿಯಲ್ಲಿದ್ದ ಅವರನ್ನು ಕಂಡು ಶಂಕರರ ಮನಸ್ಸು ತಣಿಯಿತು.  ಸಮಾಧಿಸ್ಥಿತಿಯಿಂದ ಹೊರಬಂದ ಗೋವಿಂದ ಭಗವತ್ಪಾದರಿಗೆ ಬಾಲ ವಟು ಶಂಕರರು ನಮಸ್ಕರಿಸಿ ತಮ್ಮ ಪರಿಚಯವನ್ನು ಹೇಳಿಕೊಂಡರು. ತಮ್ಮನ್ನು ಶಿಷ್ಯನನ್ನಾಗಿ ಪರಿಗ್ರಹಿಸಬೇಕೆಂದು ಬೇಡಿಕೊಂಡರು. ಗೋವಿಂದ ಭಗವತ್ಪಾದರು ಇಂಥ ಒಬ್ಬ ಯೋಗ್ಯ ಶಿಷ್ಯನಿಗಾಗಿ ಕಾಯುತ್ತಿದ್ದರು. ಶಂಕರರು ಅವರಿಂದ ಸಂನ್ಯಾಸ ಸ್ವೀಕರಿಸಿ, ಅವರಲ್ಲಿ ಅಧ್ಯಯನ ಪ್ರಾರಂಭಿಸಿದರು. ಅದ್ವೈತ ತತ್ತ್ವವನ್ನು ಆಮೂಲಾಗ್ರವಾಗಿ ಕರಗತ ಮಾಡಿಕೊಂಡರು. ಗೋವಿಂದ ಭಗವತ್ಪಾದರು ಅವರಿಗೆ ಬ್ರಹ್ಮಾನಂದ ಸ್ಥಿತಿಯನ್ನು ತಲುಪುವಂತೆ ಮಾಡಿದರು. ಈ ದರ್ಶನದಿಂದ ಶಂಕರರಿಗೆ ಪ್ರಪಂಚವೆಲ್ಲಾ ಬ್ರಹ್ಮಮಯವಾಗಿ ಕಂಡಿತು. ಆ ಆನಂದದ ಅನುಭವವನ್ನು ಮುಮುಕ್ಷುಗಳಿಗೆ ತಿಳಿಸಿಕೊಡುವಂತೆ ಗೋವಿಂದ ಭಗವತ್ಪಾದರು ಶಂಕರರಿಗೆ ಸೂಚಿಸಿದರು. ಭಗವದ್ಗೀತೆ, ಬ್ರಹ್ಮಸೂತ್ರ, ಉಪನಿಷತ್ತುಗಳಿಗೆ ತಮ್ಮ ಬ್ರಹ್ಮಾನುಭವದ ಬೆಳಕಿನಲ್ಲಿ ವಿವರಣಾತ್ಮಕವಾದ ಭಾಷ್ಯಗಳನ್ನು ಬರೆಯಲು ಹೇಳಿದರು. ಈ ರೀತಿ ಶಂಕರರ ಮುಂದಿನ ಜೀವನವು ವೇದಾಂತದ ಪ್ರಸಾರಕ್ಕೆ ಮೀಸಲಾಯಿತು.

(ಮುಂದುವರಿಯುವುದು)


# ಸಂತಕವಿ ಕಬೀರ

ಪಿ. ಪುಷ್ಪ

## ದೈವಸಂಜಾತರು

ಮಧ್ಯಯುಗದ ಹಿಂದೀ ಸಾಹಿತ್ಯದ ಮೇರುಪ್ರತಿಭೆಯಾದ ಕಬೀರರು ಶ್ರೇಷ್ಠ ಸಂತರು, ದಾರ್ಶನಿಕರು, ಭಕ್ತರು ಮತ್ತು ಸಮಾಜ ಸುಧಾರಕರು. ಇವರು ಕ್ರಾಂತಿಕವಿಗಳೂ ಕೂಡ. ಇವರ ಚಿಂತನಾಧಾರೆ ಮತ್ತು ಜೀವನಾದರ್ಶಗಳು ಎಂಥವರಿಗೂ ಬೆರಗನ್ನುಂಟುಮಾಡುತ್ತವೆ. ವಾಸ್ತವದ ಚೌಕಟ್ಟಿನಲ್ಲಿ ನಿಂತು ಲೋಕದ ಬದುಕನ್ನು ಸುಂದರಗೊಳಿಸಲು ಬದುಕಿನುದ್ದಕ್ಕೂ ಅಹರ್ನಿಶಿ ಹೋರಾಟ ಮಾಡಿದ ಇವರ ಬದುಕು ಆದರ್ಶಪ್ರಾಯವಾಗಿದೆ.

ಕಬೀರರ ಹುಟ್ಟು, ಜಾತಿ, ತಂದೆತಾಯಿಯರು, ಶಿಕ್ಷಣ ಮುಂತಾದವುಗಳ ಬಗೆಗೆ ಇಂದಿಗೂ ವಿದ್ವಾಂಸರಲ್ಲಿ ಒಮ್ಮತವಿಲ್ಲ. ರಮಾನಂದರಿಂದ ಆಶೀರ್ವದಿಸಲ್ಪಟ್ಟ ಓರ್ವ ವಿಧವೆ ಬ್ರಾಹ್ಮಣಿಯ ಗರ್ಭದಲ್ಲಿ ಕಬೀರರು ಹುಟ್ಟಿದರೆಂದೂ, ಆಕೆ ಲೋಕಾಪವಾದಕ್ಕೆ ಅಂಜಿ ಆ ಶಿಶುವನ್ನು ಲಹರ್‌ತಾರಾ ಕೆರೆಯ ದಡದಲ್ಲಿಟ್ಟು ಬಂದಳೆಂದೂ, ನೇಯ್ಗೆಯವರಾದ ನೀರೂ ಮತ್ತು ನೀಮಾ ಎಂಬ ಇಸ್ಲಾಂ ದಂಪತಿಗಳಿಗೆ ಈ ಮಗು ಸಿಕ್ಕಿ, ಅವರು ಆ ಮಗುವನ್ನು ತೆಗೆದುಕೊಂಡು ಹೋಗಿ ಸಾಕಿ ಸಲಹಿದರೆಂದೂ ಪ್ರಚಲಿತವಿದೆ. ಸಾಮಾನ್ಯವಾಗಿ ಮಹಾತ್ಮರ ವಿಷಯದಲ್ಲಿ ಈ ರೀತಿಯ ಅಸಾಮಾನ್ಯ ಘಟನೆಗಳು ಸಂಭವಿಸುವುದನ್ನು ಕಾಣುತ್ತೇವೆ. ಕಬೀರರು ಇಸ್ಲಾಂ ಕುಟುಂಬದಲ್ಲಿ ಪಾಲನೆ ಪೋಷಣೆಗೊಂಡರೂ, ಹಿಂದೂ ವಿಚಾರಗಳತ್ತ ಅವರ ಅಪಾರ ಒಲವಿದ್ದುದದನ್ನು ನೋಡಿದರೆ ಅವರು 'ಹಿಂದೂ' ಎಂದು ಬಹುತೇಕ ಎಲ್ಲರ ಅಭಿಪ್ರಾಯ.



ಕಬೀರ್ ಪಂಥಿಗಳಂತೂ ಕಬೀರರು ದೈವಾಂಶಸಂಭೂತರು, ಸ್ವತಃ ಆ ಪರಮಾತ್ಮನೇ ಬಂದು ಒಂದು ಮಗುವನ್ನು ಲೋಕಕಲ್ಯಾಣಕ್ಕಾಗಿ ಲಹರ್‌ತಾರಾ ಕೆರೆಯ ದಂಡೆಯ ತಾವರೆಯ ಎಲೆಯ ಮೇಲಿಟ್ಟಿದ್ದ ಎಂದು ನಂಬುತ್ತಾರೆ. ಕಬೀರರು ಜನಿಸಿದ ಕಾಲದ ಬಗೆಯೂ ವಾದವಿವಾದಗಳಿವೆ. ಪಾಶ್ಚಾತ್ಯ ವಿದ್ವಾಂಸರಾದ ಡಾ. ಹಂಟರ್, ಕಬೀರರ ಜನನ ಸುಮಾರು ೧೪೩೭ ರಲ್ಲಿ ಆಯಿತು ಎಂದು ಹೇಳುತ್ತಾರೆ. ಕಬೀರರು ರಮಾನಂದರಿಂದ ದೀಕ್ಷೆ ಪಡೆದಾಗ ೧೮–೨೦ ವರ್ಷದವರಿರಬೇಕು ಎಂದು ಹಂಟರ್ ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಅವರ ಜನ್ಮ ದಿನಾಂಕದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಅವರು ೧೫ನೇ ಶತಮಾನದಲ್ಲಿ ಇದ್ದರೆಂದು ಎಲ್ಲರೂ ಹೇಳುತ್ತಾರೆ. ಬಹುತೇಕ ವಿದ್ವಾಂಸರು ಕಬೀರರ ಪಾಲನೆ ಪೋಷಣೆ ಇಸ್ಲಾಂ ಪರಿವಾರದಲ್ಲಾದರೂ, ಆತ ಮೂಲತಃ ಒಬ್ಬ ಹಿಂದೂ ಎಂದು ಒಪ್ಪಿದ್ದಾರೆ.

ಕಬೀರರು ಫಕೀರರು, ಸಂತರು. ಅವರದು ಲೋಕಾನುಭವದ ಶ್ರೀಮಂತಿಕೆ. **"ಮಸಿ ಕಾಗದ ಮುಟ್ಟಿಲ್ಲ, ಕೈಯಲ್ಲಿ ಹಿಡಿದಿಲ್ಲ ಲೇಖನಿ"** ಎಂದು ಹೇಳುವ ಮೂಲಕ ಅವರು ತಾವು ಕಲಿತವರಲ್ಲ ಎಂದು ಹೇಳಿಕೊಂಡಿದ್ದಾರೆ. ಇವರು ಶಾಸ್ತ್ರಪುರಾಣಗಳನ್ನು ಓದದಿದ್ದರೂ ಅವುಗಳ ಬಗ್ಗೆ ಕೇಳಿ ತಿಳಿದವರಾಗಿದ್ದರು; ಆ ಕುರಿತು ಆಳವಾದ ಚಿಂತನ. ಮಂಥನ ನಡೆಸಿದ್ದರು.

ಕಬೀರರಿಗೆ ರಾಮನೆಂದರೆ ಪ್ರಾಣ. ರಾಮನಾಮ, ರಾಮನ ಭಜನೆ, ಧ್ಯಾನ, ಜಪ ಅವರಿಗೆ ಅತ್ಯಂತ ಪ್ರಿಯವಾಗಿದ್ದವು. ರಾಮಧ್ಯಾನದಲ್ಲಿ ಗಂಟೆಗಟ್ಟಲೆ, ದಿನಗಟ್ಟಲೆ ಕಳೆಯುತ್ತಾ ಆತ್ಮಾನಂದವನ್ನು ಪಡೆಯುತ್ತಿದ್ದರು. ಕಬೀರರು ಭಗವಂತನ ಸಚ್ಚಿದಾನಂದ ಸ್ವರೂಪವನ್ನು ತನ್ಮಯತೆಯಿಂದ ಮನನ ಮಾಡುತ್ತ, ಪರಮಶಾಂತಿಯನ್ನು, ಆನಂದವನ್ನು ಅನುಭವಿಸುತ್ತಿದ್ದರು.

ಉತ್ತರಭಾರತದ ಸಂತಕವಿ, ಸಮಾಜಸುಧಾರಕ ಕಬೀರದಾಸರ ಜೀವನ, ಸಂದೇಶಗಳ ಸರಳ ನಿರೂಪಣೆಯನ್ನು ಮಾಡಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

ಕಬೀರರು ಹೇಳುತ್ತಾರೆ, "ರಾಮನಾಮದ ಮಹಿಮೆಯನ್ನು ಚರ್ಚೆಯ ಮೂಲಕವಾಗಲಿ ಅಥವಾ ಇನ್ನಾವುದೇ ರೀತಿಯಲ್ಲಾಗಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ಧ್ಯಾನದ ಮೂಲಕ ಮಾತ್ರವೇ ಅದನ್ನು ಅನುಭವಿಸುವುದು ಸಾಧ್ಯ. ಭಗವಂತನ ನಾಮದಲ್ಲಿ ಭಕ್ತಿ ಮತ್ತು ನಂಬಿಕೆ ಇರಬೇಕು. ಬೆಂಕಿಗೆ ಸುಡುವ ಶಕ್ತಿ ಹೇಗಿದೆಯೋ ಹಾಗೆಯೇ ಭಗವನ್ನಾಮಕ್ಕೆ ಪಾಪಗಳನ್ನು ಬಯಕೆಗಳನ್ನು ದಹಿಸುವ ಶಕ್ತಿಯಿದೆ. ಹೇ ಮಾನವಾ, ಭಗವನ್ನಾಮವನ್ನು ಆಶ್ರಯಿಸಿ ಹುಟ್ಟು ಸಾವುಗಳ ಅಪಾರವಾದ ಸಾಗರವನ್ನು ದಾಟಿ ಹೋಗು."

## ಗುರುಮಹಿಮೆ

ಕಬೀರರು ಗುರುವಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ: **ಗುರುಗೋವಿಂದ ದೇವು ಖಡೇ ಕಾಕೆ ಲಾಗೂಂ ಪಾಯ್। ಬಲಿಹಾರಿ ಗುರು ಅಸನೆ ಗೋವಿಂದ ದಿಯಾ ದಿಬಾಯ್॥** "ಗುರು ಗೋವಿಂದರಿಬ್ಬರೂ ಮುಂದೆ ನಿಂತಿದ್ದಾರೆ. ನಾನು ಯಾರ ಕಾಲಿಗೆ ಬೀಳಲಿ? ಗೋವಿಂದನನ್ನು ತೋರಿಸಿಕೊಟ್ಟಿರುವ ಗುರುವಿಗೆ ನಾನು ನನ್ನನ್ನೇ ಅರ್ಪಿಸಿಕೊಳ್ಳುವೆ. ಗುರು ಗೋವಿಂದರಿಬ್ಬರೂ ಒಂದೇ, ಆದರೆ ಆಕಾರ ಮಾತ್ರ ಬೇರೆ ಬೇರೆ. 'ಅಹಂ' ಅನ್ನು ಅಳಿಸಿಕೊಂಡು ಜೀವನ್ಮುಕ್ತರಾದಾಗ ಆ ದೇವರನ್ನು ಕಾಣುತ್ತೇವೆ" ಎಂದು ಅಭಿಪ್ರಾಯಪಡುತ್ತಾರೆ.

ಕಬೀರರು, **ಈಶ್ವರ, ಬ್ರಹ್ಮ, ಸತ್ಯ, ಓಂ** –ಇವೆಲ್ಲವೂ ಗುರುವೇ ಎಂದು ನಂಬಿದವರು. "ಗುರುವನ್ನು ಭಕ್ತಿಭರಿತನಾಗಿ ಸೇವಿಸಿ ಮನಸ್ಸಿನಲ್ಲಿ ನೆಲೆಗೊಳಿಸಿಕೊಳ್ಳಬೇಕು. ಗುರುವು ಪ್ರತ್ಯಕ್ಷ ದೇವರ ಅವತಾರ. ಗುರುವಿನ ಭೌತಿಕ ದೇಹ ಕಾಲಕ್ರಮದಲ್ಲಿ ಕಣ್ಮರೆಯಾಗಬಹುದು. ಆದರೆ ಅನಂತರವೂ ಆತನ ಮೂಲಕ ವ್ಯಾಪಕವಾದ ಆ ಭಗವಂತನನ್ನು ಕಾಣುವಿರಿ. ಗುರುವಿನ ಮೂಲಕ ಆತ್ಮಸಾಕ್ಷಾತ್ಕಾರವನ್ನು ಹೊಂದುವಿರಿ" ಎಂದು ಕಬೀರರು ಬೋಧಿಸುತ್ತಾರೆ.

## ಭಕ್ತ ಕಬೀರ

ಕಬೀರರು ಶ್ರೇಷ್ಠ ಅಧ್ಯಾತ್ಮ ಸಾಧಕರು, ಭಕ್ತಿಭಂಡಾರಿಗಳು, ಭಕ್ತನ ನಯವಿನಯ, ದಾಸ್ಯಭಾವ, ಪರಹಿತ ಚಿಂತನೆ, ಲೋಕಕಲ್ಯಾಣ ಭಾವ ಎಲ್ಲವೂ ಇವರಲ್ಲಿ ಸಾಕಾರಗೊಂಡಿರುವುದನ್ನು ಕಾಣಬಹುದು.

ರಾಮನಾಮ ಸ್ಮರಣೆ ಕಬೀರರಿಗೆ ಅತ್ಯಂತ ಆಪ್ಯಾಯಮಾನವಾದುದು. **ರಾಮ ಜಪಹು ಕಹಾ ಭಯೌ ಅಂಧಾ। ರಾಮ ಬಿನಾ ಜಮ ಮೇಲ್ಹೈ ಪಂದಾ॥** – "ರಾಮನಾಮವನ್ನು ಜಪಿಸದೆ ನೀನೆಂಥ ಕುರುಡನಾಗಿರುವೆ. ರಾಮನಿಲ್ಲದಿದ್ದರೆ ಆ ಯಮನೂ ತನ್ನ ಬಲೆಯನ್ನೊಡ್ಡುವನು." ಕಬೀರರ ಪ್ರಕಾರ ರಾಮ ದಶರಥನ ಮಗನಲ್ಲ. ಸಾಕಾರ ಪುರುಷನಲ್ಲ. 'ರಾಮ' ಶಬ್ದ ಸಾತ್ವಿಕತೆ, ಪ್ರಾಮಾಣಿಕತೆ, ಸತ್ಯ ಮತ್ತು ಮಾನವೀಯ ಅಂತಃಕರಣಕ್ಕೆ ಪರ್ಯಾಯವಾಚಿಯಾಗಿದೆ. **"ಲೂಟ್ ಸಕೈತೋ ಲೂಟಿಯೇ ರಾಮನಾಮ ಹೈ ಬಂಡರ್ ಪೀಛೇ ಹೀ ಪಛ್ ತಾವೋ ಗೇ ಯಹ ತನ್ ಜೈಹೆ ಛೋಟ್"** – "ಲೂಟಿ ಮಾಡುವುದಾದರೆ ರಾಮನಾಮವೆಂಬ ಭಂಡಾರವನ್ನು ಲೂಟಿ ಮಾಡು. ಸಾವು ಬಂದಾಗ ಪಶ್ಚಾತ್ತಾಪ ಪಡಬೇಡ."

ಮಧುರವೂ, ಮನೋಹರವೂ ಆದ ರಾಮನಾಮ ಕಬೀರರ ಉಸಿರಾಗಿತ್ತು. ಶ್ರೀರಾಮನಾಮಾಮೃತವನ್ನು ಎಡೆಬಿಡದೆ ಸವಿಯುವ ಭಕ್ತನೇ ಸರ್ವೋತ್ತಮನು ಎಂದು ಅವರು ಹೇಳುತ್ತಾರೆ. ಭಗವದನುಭವದಲ್ಲಿ ಆಳವಾಗಿ ಮುಳುಗಿ ಅದರಿಂದುಂಟಾದ ಆನಂದವನ್ನು ಮಧುರವಾದ ಭಜನೆಗಳ, ದೋಹೆಗಳ ರೂಪದಲ್ಲಿ ಹಾಡಿದ್ದಾರೆ. ಇವುಗಳಲ್ಲಿ ವಾಸ್ತವಿಕ ಸಂಗತಿಗಳೂ ಬೆರೆತಿವೆ.

ಕಬೀರರು ತಮ್ಮ ಭಕ್ತಿ ಸಾಧನೆಗಳಿಗಾಗಿ ಪ್ರಪಂಚವನ್ನು ತ್ಯಜಿಸಿ ಕಾಡನ್ನು ಸೇರಿದ ಸಂನ್ಯಾಸಿಗಳಲ್ಲ. ಜೀವನಪರ್ಯಂತ ಗೃಹಸ್ಥಾಶ್ರಮಿಗಳಾಗಿದ್ದು ಸಾಮಾಜಿಕ ಜೀವನದ ಸುಖದುಃಖ, ಕಷ್ಟ–ಕಾರ್ಪಣ್ಯಗಳನ್ನು ಅನುಭವಿಸಿ ಭಕ್ತಿಪಂಥದಲ್ಲಿ ಮುಂದುವರಿದ ಸಾಧಕರು. ಭಗವಂತನು ಪ್ರೇಮಪೂರಿತನು, ಕೃಪಾಪರಿಪೂರ್ಣನು, ಜಾತಿ ಕುಲ ಸ್ತ್ರೀ ಪುರುಷ ಎಂಬ ಭೇದಗಳಿಲ್ಲದೆ ಎಲ್ಲರಿಗೂ ಒಲಿಯುವನು ಎಂಬ ನಂಬಿಕೆ ಇವರದು. ಭಕ್ತಿಯೇ ಮುಕ್ತಿಯ ದಾರಿ, ಭಕ್ತಿಗೆ ಎಲ್ಲರೂ ಅಧಿಕಾರಿಗಳೆಂಬ ಭಗವತ್ತತ್ತ್ವವನ್ನು ಅವರು ತಮ್ಮ ಜೀವನದ ನಡವಳಿಕೆಯ ಮೂಲಕ ತೋರಿಸಿಕೊಟ್ಟರು.